ಜೆ.ಪ್ರದೀಪಕುಮಾರ, ಹೂವಿನಹಡಗಲಿ
*ಹೊಸ ಸಂಸಾರಕ್ಕೂ, ಹೊಸ ಸರ್ಕಾರಕ್ಕೂ ಏನು ವ್ಯತ್ಯಾಸ?*



ಹೊಸ ಸಂಸಾರದಲ್ಲಿ ಪೋಷಣೆ ಹೆಚ್ಚು, ಹೊಸ ಸರ್ಕಾರದಲ್ಲಿ ಘೋಷಣೆ ಹೆಚ್ಚು!

ಬಿ.ವಿ.ನಾರಾಯಣ್, ಬೆಳಗೊಳ
*ಎಲ್ಲರೂ ಹೆಸರಿನ ಮುಂದೆ ತಂದೆಯ/ ಊರಿನ ಹೆಸರು ಸೇರಿಸಿಕೊಳ್ಳುತ್ತಾರೆ. ಆದರೆ ತಾಯಿಯ ಹೆಸರನ್ನೇಕೆ ಸೇರಿಸಿಕೊಳ್ಳುವುದಿಲ್ಲ?*
ಕೆಟ್ಟರೆ ಅಪ್ಪನದೋ, ಊರಿನದೋ ಹೆಸರು ಕೆಡಲೀಂತ!

ಎಂ.ಜಿ.ನೇಹವರ್ಷಿಣಿ, ಬಳ್ಳಾರಿ
*ಇರುಳು ಕಂಡ ಬಾವಿಗೆ ಹಗಲು ಬೀಳುವವರು ಯಾರು ಸರ್?*
ಇರುಳಿನಲ್ಲಿ ಬಿದ್ದು ಮೂರು ದಿನ ಆದವರನ್ನು ಮೇಲೆತ್ತುವವರು.

ಆರ್. ಮಧುಸೂದನ್, ಹಾಸನ
*ದೇವಸ್ಥಾನಕ್ಕೂ, ಸ್ಮಶಾನಕ್ಕೂ ವ್ಯತ್ಯಾಸವೇನು?*
ಇಲ್ಲಿ ಗಾಡು, ಅಲ್ಲಿ ಸುಡುಗಾಡು!

ರಂಜಿತಾ ನಿಟ್ಲೆ, ಮಾವಿನಸರ
*ಯಡ್ಡಿ ಕೆಜೆಪಿ ಕಟ್ಟಿದ್ರು. ಅಡ್ವಾನಿ ಏನ್ ಕಟ್ತಾರೋ?*



ಗಂಟುಮೂಟೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಈ ಅಂಕಣ ಒಂದು ರೀತಿ ಅನುಭವ ಮಂಟಪ, ಜಾತ್ಯತೀತ ವೇದಿಕೆಯಿದ್ದಂತೆ ಎಂದು ನನ್ನ ಅಭಿಪ್ರಾಯ. ನೀವೇನಂತೀರಿ?*
ಯಥಾ ಓದುಗ ತಥಾ ಪತ್ರಿಕೆ; ಯಥಾ ಪತ್ರಿಕೆ ತಥಾ ಅಂಕಣ!

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್
*ಕೆಲವು ನಗರವಾಸಿಗಳಿಗೆ ನಾಯಿಯ ಮೇಲಿರುವಷ್ಟು ಪ್ರೀತಿ ತಾಯಿಯ ಮೇಲೆ ಏಕೆ ಇರುವುದಿಲ್ಲ?*
ನಾಯಿ ದೂರು, ಬುದ್ಧಿಮಾತು ಎರಡೂ ಹೇಳುವುದಿಲ್ಲವಲ್ಲ!

ವಿ.ಹಮೀದ್, ವಿಟ್ಲ
*ಹುಡುಗಿ ಜೀವಕ್ಕಿಂತ ಹೆಚ್ಚಾಗಿ ನನ್ನನ್ನು ಲವ್ ಮಾಡುತ್ತಿರುವುದಾಗಿ ಹೇಳುತ್ತಾಳೆ. ಹೇಗೆ ನಂಬಲಿ?*
ಸರಿಯಾಗಿ ಕೇಳಿಸಿಕೊಳ್ಳಿ, ಅದು ಜೀವಕ್ಕಿಂತ ಅಲ್ಲ, ಜೀವಕ್ಕಂತ. ಹೆರೆಯುವುದರಲ್ಲಿ ಎಕ್ಸ್‌ಪರ್ಟ್ ಅಂತೆ ಅವಳು!

ಎಂ.ಎನ್.ಸೋಮಶೇಖರ್, ಮೈಸೂರು
*ಕುರುಡರಿಗೂ, ಕುಡುಕರಿಗೂ ಇರುವ ವ್ಯತ್ಯಾಸವೇನು?*
ಅವರು ನೋಟಕ್ಕಾಗಿ ಏನು ಬೇಕಾದರೂ ಕೊಡುತ್ತಾರೆ, ಇವರು ಲೋಟಕ್ಕಾಗಿ ಏನು ಬೇಕಾದರೂ ಕೊಡುತ್ತಾರೆ!

ಅಲ್ಲಾಬಕ್ಷ್, ಮಧುಗಿರಿ
*ಕಾರ್ಡಿಗೆ ಮೂವತ್ತು ಕೆಜಿ ಅಕ್ಕಿ ಕೊಡುತ್ತಿರುವಾಗ ನಾನೇಕೆ ಮತ್ತೊಂದು ಮದುವೆ ಆಗಬಾರದು?*
ಆಗಿ. ಸವತಿಯರ ಜಗಳದಲ್ಲಿ ನಿಮ್ಮ ಬಾಯಿಗೆ ಅಕ್ಕಿ ಕಾಳೇ ಗಟ್ಟಿ!

ದೇಶವಳ್ಳಿ ಶಿವು, ಸಂತೇಮರಹಳ್ಳಿ
*ಆಸ್ತಿಕರೂ ಅಲ್ಲ, ನಾಸ್ತಿಕರೂ ಅಲ್ಲದವರನ್ನು ಏನೆನ್ನಬಹುದು?*
ಅಬ್ಬೇಪಾರಿ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಗಾನಸರಸ್ವತಿ ಅಂಧರಿಗೇ ಒಲಿಯುವುದೇಕೆ?*
ತಲ್ಲೀನತೆ, ಏಕಾಗ್ರತೆ ಪಡೆಯಲು ಮುಚ್ಚಿದ ಕಣ್ಣೇ ಶ್ರೇಷ್ಠ!

ಕೆ.ಮೈಥಿಲಿಕೃಷ್ಣ, ಬೆಂಗಳೂರು
*ಲಂಚದ ರುಚಿ ಏನು?*
ರೈಟ್ ಆದರೆ ಸಿಹಿ, ರೈಡ್ ಆದರೆ ಕಹಿ!

ಷಣ್ಮುಖ ಎಸ್.ಹೆಚ್, ಹಳೇಬಾವಿ
*ಸಿನಿಮಾ ರಂಗದವರಿಗೂ, ರಾಜಕೀಯ ರಂಗದವರಿಗೂ ಇರುವ ವ್ಯತ್ಯಾಸವೇನು ಸರ್?*
ಅವರು ಕಟ್ಟುಕಥೆಗಳನ್ನು ಕಟ್ಟುತ್ತಾರೆ; ಇವರು ಕಟ್ಟುಗಳ ಕಂತೆಗಳನ್ನು ಒಟ್ಟುತ್ತಾರೆ!

## ಬಹುಮಾನಿತ ಪ್ರಶ್ನೆ

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಗಂಡಸಿಗೆ ಕಷ್ಟವಾಗುವ ಕೆಲಸಗಳನ್ನು ಸರ್ಕಾರಿ ಕಚೇರಿಗಳಲ್ಲಿ ಹೆಂಗಸರು ಸುಲಭವಾಗಿ ಮಾಡಿಕೊಂಡು ಬರುವ ರಹಸ್ಯವೇನು?*
ನೋಟಿಗಿಂತಲೂ ನೋಟದ ಪ್ರಭಾವ ಹೆಚ್ಚಾದ್ದರಿಂದ!

ಪಿ.ಜೆ.ರಾಘವೇಂದ್ರ, ಮೈಸೂರು
*ನಿಮಗೂ ಸಿಕ್ಸ್ ಪ್ಯಾಕ್ ಇದೆಯಂತೆ?*
ಸಿಕ್ಸ್ ಪ್ಯಾಕ್ ಅಲ್ಲ, ನನ್ನದೇನಿದ್ದರೂ ಫ್ಯಾಮಿಲಿ ಪ್ಯಾಕ್!

ನವಿರವಿ, ಬಾಳೆಹೊನ್ನೂರು
*ದೇವರಿಗೆ ಬೇಜಾರಾದಾಗ ಯಾರ ಜೊತೆ ಯಾವ ಆಟವನ್ನು ಆಡುತ್ತಾನೆ?*
ನಾವು ಚಿಕ್ಕಂದಿನಲ್ಲಿ ಸಣ್ಣ ಕಲ್ಲನ್ನೇ ಒದ್ಕೊಂಡೊದ್ಕೊಂಡು ಹೋಗ್ತಿದ್ವಾಗೇನೇ ಭೂಮೀನ ಒದ್ಕೊಂಡ್ಹೋಗ್ತಾನೆ, ಭೂಕಂಪ, ಸುನಾಮಿ ಆಗುತ್ತೆ!

ಪ್ರತಿಮಾ ಬಾಯರಿ, ಶಿವಮೊಗ್ಗ
*ಯಡ್ಯೂರಪ್ಪನವರನ್ನು ಬಿಜೆಪಿಗೆ ಮರಳಿ ಕರೆತರಲು ಮಧ್ಯಸ್ಥಿಕೆ ವಹಿಸ್ತೀರಾ ರಾಮ್?*




ನಾನು ಎಂದೂ ಗುಡಿಸಿದ ಕಸವನ್ನು ಮತ್ತೆ ಒಳಕ್ಕೆ ತಂದಿಲ್ಲ!

ಸಾರಂಗ್, ಬೆಂಗಳೂರು
*ಮನುಷ್ಯ ತನ್ನ ಜೀವನದಲ್ಲಿ ತಿಳಿದುಕೊಳ್ಳಬೇಕಾದ ಅತಿ ಮುಖ್ಯವಾದ ಸಂಗತಿ ಯಾವುದು?*
ಸಂಗತಿಗಳನ್ನು ತಿಳಿದುಕೊಳ್ಳಬೇಕು ಎಂಬ ಸಂಗತಿ.

ಪಿ.ಎನ್.ಶ್ರೀವತ್ಸ, ಬೆಂಗಳೂರು
*ಚಿನ್ನ; ಇದರ ನಿಜವಾದ ಅರ್ಥ?*
ಮೋಹ ಹುಟ್ಟಿಸುವ ಲೋಹ!

ಅಭಿನಂದನ್ ಎಂ, ಮಂಡ್ಯ
ರಾಜಕಾರಣಿಗಳು ಖಾದಿಯನ್ನೇ ಧರಿಸಲು ಕಾರಣವೇನು?
ಸರಿಯೇ! ಹಿಂದಿಯಲ್ಲಿ ಖಾ ದೀ ಎಂದರೆ ತಿಂದುಬಿಟ್ಟೆ ಎಂದರ್ಥ!

■ ರಾಮ್